<u>ದಿನಾಂಕಃ 15-02-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ- 5 ರಿಂದ 9 ನೇ ಪ್ರತಿವಾದಿ ಪರಃ ಶ್ರೀ ಐ.ಎಸ್.ಟಿ. ವಕೀಲರಿಂದಃ-</u>

ಈ ದಾವೆ ಹೂಡುವ ಕಾಲಕ್ಕೆ ದಾಖಲಾತಿಗಳನ್ನ ಕೂಲಕುಂಶವಾಗಿ ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿ ನನಗೆ ಯಾವ ದಾಖಲೆಗಳನ್ನ ತೋರಿಸಿದರೋ ಅವುಗಳನ್ನ ನೋಡಿದ್ದೇನೆ ಎನ್ನುತ್ತಾರೆ. ದಿಃ21.01.1981 ರ ವಿಭಾಗ ಪತ್ರವನ್ನ ನಾನು ನೋಡಿದ್ದೇನೆ. ಸದರಿ ವಿಭಾಗ ಪತ್ರದ ಆಧಾರದ ಮೇಲೆ ಬಿ.ಎನ್ ಶ್ರೀಕಂಠಯ್ಯ ಮತ್ತು ಶ್ರೀ ಮಂಜುನಾಥಯ್ಯ ಇವರಿಗೆ ಖಾತೆ ವರ್ಗಾವಣೆಯಾಗಿದೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಹಾಜರು ಮಾಡಿರುವ ಹಕ್ಕುಬದಲಾವಣೆ ವಹಿ ಪ್ರಕಾರ ಯಾವಾಗ ಅವರ ಹೆಸರಿಗೆ ಖಾತೆ ವರ್ಗಾವಣೆಯಾಗಿದೆ ಎಂದರೆ ಸಾಕ್ಷಿ ನನ್ನ ಪ್ರಕಾರ ಅವರ ಹೆಸರಿಗೆ ಖಾತೆ ಆಗಿಯೇ ಇಲ್ಲ ಎನ್ನುತ್ತಾರೆ. ಈ ದಾವೆ ಹೂಡುವ ಪೂರ್ವದಲ್ಲಿಯೇ ದಾವಾ ಅನುಸೂಚಿ ಎ ಸ್ವತ್ತು ಅನ್ಯಕ್ರಾಂತ ಆಗಿ ಬಡಾವಣೆ ನಿರ್ಮಾಣ ಮಾಡಲಾಗಿದೆ ಎಂದರೆ ಸರಿಯಲ್ಲ. 5 ರಿಂದ 9 ನೇ ಪ್ರತಿವಾದಿಗಳು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನ ಓದಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ನಾನು ಯಾವ ದಾಖಲೆಗಳನ್ನ ತೋರಿಸಿದ್ದಾರೋ ಅವುಗಳನ್ನ ನೋಡಿದ್ದೇನೆ ಮತ್ತು ಅವರು ಈ ದಾವೆಯಲ್ಲಿ ಸಲ್ಲಿಸಿರುವ ತಕರಾರನ್ನ ಓದಿ ತಿಳಿದುಕೊಂಡಿದ್ದೇನೆ ಎನ್ನುತ್ತಾರೆ. 5 ರಿಂದ 9 ನೇ ಪ್ರತಿವಾದಿಗಳು ತಮ್ಮ ಲಿಖಿತ ಹೇಳಿಕೆಯಲ್ಲಿ ದಾವಾ ಅನುಸೂಚಿ ಎ ಸ್ವತ್ತು ಅನ್ಯಕ್ರಾಂತ ಆಗಿದೆ ಮತ್ತು ಯಾವ ನಿವೇಶನ ಯಾರಿಗೆ

ಹಂಚಿಕೆಯಾಗಿದೆ ಎಂದು ವಾದಿಸಿದ್ದಾರೆ ಎಂದರೆ ಸಾಕ್ಷಿ ಸದರಿ ಸ್ವತ್ತಿನಲ್ಲಿ 40 ನಿವೇಶನಗಳನ್ನ ವಿಂಗಡಿಸಲಾಗಿದೆ ಮತ್ತು ಆ ನಿವೇಶನಗಳು ಯಾರಿಗೆ ಹಂಚಿಕೆಯಾಗಿದೆ ಎಂದು ಬರೆದಿಲ್ಲ ಎನ್ನುತ್ತಾರೆ. 9 ನೇ ಪ್ರತಿವಾದಿ, ವಾಣಿ ಪ್ರಸಾದ್, ಪದ್ಮಾವತಿ, ಸೀತಾರಾಮ್, ಗಿರೀಶ್ ಮತ್ತು ಮಾಳವಿಕ ಇವರು 5 ನೇ ಪ್ರತಿವಾದಿ ಪರವಾಗಿ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಅನ್ಯಕ್ರಾಂತವಾದ ಆಸ್ತಿ ಪೈಕಿ 2599.87 ಚದರ ಮೀಟರ್ ಆಸ್ತಿಯನ್ನ ಸರ್ಕಾರದ ಪರವಾಗಿ ದಾನ ಪತ್ರ ಬರೆದುಕೊಡಲಾಗಿದೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಮುಂದುವರಿದು 433.03 ಚದರ ಮೀಟರ್ ಆಸ್ತಿಯನ್ನ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಕೊಡಮಾಡಲಾಗಿದೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಮುಂದುವರಿದು 866.05 ಚದರ ಮೀಟರ್ ಆಸ್ತಿಯನ್ನ ಉದ್ಯಾನವನಕ್ಕೆ ಮೀಸಲಿಡಲಾಗಿದೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ದಾವಾ ಅನುಸೂಚಿ ಎ ಸ್ವತ್ತಿನಲ್ಲಿ ವಿಂಗಡಿಸಿರುವ ನಿವೇಶನಗಳಿಗೆ ಸಂಬಂಧಿಸಿದಂತೆ ನಗರಸಭೆಯಲ್ಲಿ ಅಸ್ಸೆಸ್ಮೆಂಟ್ ನಂಬರ್ ಕೊಡಲಾಗಿದೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ದಾವಾ ಅನುಸೂಚಿ ಎ ಸ್ವತ್ತಿನಲ್ಲಿ ಆಗಿರುವ ನಿವೇಶನಗಳ ಪೈಕಿ ಕೆಲವನ್ನ ಮಾರಾಟ ಮಾಡಲಾಗಿದೆ ಎಂದರೆ ಸಾಕ್ಷಿ ನಾನು ಪ್ರತಿವಾದಿಗಳ ಬಳಿ ಹಿಸ್ಸೆ ಕೇಳಿದಾಗ ಯಾವುದೇ ನಿವೇಶನಗಳು ಮಾರಾಟ ಆಗಿರಲಿಲ್ಲ, ಆನಂತರ ನಾನು ಬೆಂಗಳೂರಿನಿಂದ ಚಿಕ್ಕಮಗಳೂರಿಗೆ ಬಂದು ಅಲ್ಲಂಪುರ ಗ್ರಾಮ ಪಂಚಾಯಿತಿಗೆ ತಕರಾರು ಕೊಟ್ಟಿದ್ದೇನೆ ಎನ್ನುತ್ತಾರೆ. 1981 ರ ವಿಭಾಗ ಪತ್ರವನ್ನ ನಾನು ಎಲ್ಲಿಯೂ ಪ್ರಶ್ನೆ ಮಾಡಿಲ್ಲ. 2021 ರಲ್ಲಿ ಆಗಿರುವ ವಿಭಾಗ ಪತ್ರವನ್ನ ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿ ಆಗ ಯಾವುದೇ ವಿಭಾಗ

ಆಗಿಲ್ಲ ಎನ್ನುತ್ತಾರೆ. ದಿಃ27.01.2021 ರಂದು 1 ರಿಂದ 8 ನೇ ಪ್ರತಿವಾದಿಗಳು ನೊಂದಾಯಿತ ವಿಭಾಗ ಪತ್ರವನ್ನ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. 5 ರಿಂದ 9 ನೇ ಪ್ರತಿವಾದಿಗಳು ಈ ದಾವೆಯಲ್ಲಿ ಸಲ್ಲಿಸಿರುವ 20 ನೇ ಕಂಡಿಕೆಯಲ್ಲಿ ದಿಃ27.01.2021 ರ ವಿಭಾಗ ಪತ್ರದ ಬಗ್ಗೆ ಪ್ರಸ್ತಾಪಿಸಿದ್ದಾರೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. 5 ರಿಂದ 9 ನೇ ಪ್ರತಿವಾದಿಗಳು ನ್ಯಾಯಾಲಯದ ಮುಂದೆ ಲಿಖಿತ ಹೇಳಿಕೆ ದಾಖಲಿಸಿದ ನಂತರ ನಾನು ದಿಃ27.01.2021 ರ ವಿಭಾಗ ಪತ್ರವನ್ನ ತೆಗೆಸಿ ಪರಮಾರ್ಷಿಸುವ ಪ್ರಯತ್ನ ಮಾಡಿಲ್ಲ. ದಾವಾ ಅನುಸೂಚಿ ಎ ಸ್ವತ್ತು ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಅದರ ಗುರುತಿಸುವಿಕೆ ಹಾಲಿ ಬದಲಾವಣೆಯಾಗಿದೆ ಎಂದರೆ ಸರಿಯಲ್ಲ. ನಾನು ದಾವಾ ಅನುಸೂಚಿ ಎ ಸ್ವತ್ತಿನಲ್ಲಿ ಯಾವುದೇ ಕಾಲಕ್ಕೆ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿ. ಅದೇ ರೀತಿ ದಾವಾ ಅನುಸೂಚಿ ಬಿ ಸ್ವತ್ತಿನಲ್ಲಿಯೂ ಸಹ ನಾನು ಸ್ವಾಧೀನಾನುಭವದಲ್ಲಿ ಇರಲಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರಿದು ಸದರಿ ಸ್ವತ್ತಿನಲ್ಲಿ ಯಾರೂ ಸ್ವಾಧೀನದಲ್ಲಿ ಇರಲಿಲ್ಲ ಎನ್ನುತ್ತಾರೆ. ದಾವಾ ಅನುಸೂಚಿ ಬಿ ಸ್ವತ್ತನ್ನ ಇವರು ಬಾಡಿಗೆ ಕೊಟ್ಟಿದ್ದು ಬಾಡಿಗೆ ಹಣ ಪಡೆಯುತ್ತಿದ್ದಾರೆ. ಸಾಕ್ಷಿ ಮುಂದುವರಿದು ನನ್ನ ಅಜ್ಜ ಜೀವಂತ ಇದ್ದಾಗ ಅವರು ಸ್ವಾಧೀನದಲ್ಲಿ ಇದ್ದರು, ನಾವು ಆಗಾಗ ಬಂದು ಹೋಗುತ್ತಿದ್ದೆವು ಎನ್ನುತ್ತಾರೆ. ನನ್ನ ತಾಯಿ ಈಗ್ಗೆ 40 ವರ್ಷದಲ್ಲಿ ಸ್ವಾಧೀನಾನುಭವದಲ್ಲಿ ಇಲ್ಲ ಎಂಬುದು ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ತಾಯಿ ವಿವಾಹವಾದ ನಂತರ ದಾವಾ ಸ್ವತ್ತುಗಳಲ್ಲಿ ಸ್ವಾಧೀನ ಇರಲಿಲ್ಲ ಆದರೆ ತನ್ನ

ತವರು ಮನೆಗೆ ಬಂದು ಹೋಗುತ್ತಿದ್ದರು ಎನ್ನುತ್ತಾರೆ. 1981 ರಲ್ಲಿ ನನ್ನ ತಾಯಿ ತಮ್ಮ ಹಿಸ್ಸಾ ಹಕ್ಕನ್ನ ಬಿಟ್ಟುಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ನನ್ನ ತಾಯಿ ತಮ್ಮ ಜೀವಿತಾವಧಿಯಲ್ಲಿ ದಾವಾ ಸ್ವತ್ತುಗಳ ಸಂಬಂಧ ಹಿಸ್ಸೆ ಕೇಳಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಜೀವಂತ ಇದ್ದ ಕಾಲಕ್ಕೆ ತಮ್ಮ ಹಿಸ್ಸಾ ಹಕ್ಕನ್ನ ಬಿಟ್ಟುಕೊಟ್ಟಿದ್ದರಿಂದ ನನಗೆ ದಾವಾ ಸ್ವತ್ತುಗಳಲ್ಲಿ ಹಿಸ್ಸೆ ಕೇಳುವ ಹಕ್ಕು ಇಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ- 1 ರಿಂದ 4 ನೇ ಪ್ರತಿವಾದಿ ಪರಃ ಶ್ರೀ ಬಿ.ಎಂ.ಎಲ್.ಜಿ. ವಕೀಲರಿಂದಃ-</u>

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ